

ಮುಂದೆ ನಿಷ್ಠಿ ಹೆಸರಿದೆ. ಇದು ಸತ್ಯವೂ ಕೂಡ. ಚಾಚಾ ಈಗ ಹೇಳುವ ಮಾಹಿತಿಯೂ ಅದೇ. ಮತ್ತು ಆತನ ಹೆಸರು ಸಹ ಬಂದೇ ನವಾಜ ನಿಷ್ಠಿ. ಒಂದು ನನ್ನೂರಿನ ಸಂತನ ಹೆಸರು. ಇನ್ನೊಂದು ನನ್ನ ಮನೆತನದ ಹೆಸರು. ಅದು ನೆನಪಾಗಿ ಮಾತಾಡಲು ಬಾಯ್ತೆರೆದಾಗಲೇ ಆ ಮಿಲಿಟರಿ ಅಧಿಕಾರಿ, 'ಓ...ಹೋಹೋ ಇದು ಧರ್ಮವನ್ನು ಮೀರಿದ ಜಾಲವಿರಬಹುದು' ಎಂದ.

ನಾನು ಮಾತಾಡಿದ್ದು ನಿಜವಾಗಿಯೂ ನನ್ನ ಚಾಚಾನ ಜೊತೆ ಸರ್. ಆತ ನಮ್ಮದೇ ಕರಳುಬಳ್ಳಿ, ನನಗೆ ಇಲ್ಲಿ ಅಚಾನಕ್ ಆಗಿ ಸಿಕ್ಕಿದ್ದಾನೆ. ಬಂದೇನವಾಜ ಮತ್ತು ನಿಷ್ಠಿ ಎನ್ನುವ ಹೆಸರಿನಿಂದಲೇ ಬಂಧವು ಏರ್ಪಟ್ಟಿತು.

'ಬದ್ಮಾಶ್ ದೇಶದ್ರೋಹಿಗಳೇ, ನಮ್ಮ ಮಿಲಿಟರಿ ಸರ್ಕಾರಗಳಿದ್ದರೆ ನಿಮ್ಮನ್ನು ಇಲ್ಲವಾಗಿಸಲು ಕಾರಣವೇ ಇರುತ್ತಿರಲಿಲ್ಲ' ಮಾರ್ಷಲ್ ಅವರ ಆಸ್ಫೋಟಕ ಧ್ವನಿಗೆ ಬೆಚ್ಚಿ ಬೆರಗಾಗಿದ್ದೆ ನಾನು. 'ಮುಂಬೈ ಘಟನೆಯಲ್ಲಿ ನೀನು ಎಲ್ಲಿದ್ದೆ?', 'ಬಾಲಕನಾಗಿದ್ದೆ, ಮುಂಬೈ ನೋಡಿದ್ದು ಕಡಿಮೆಯೇ' ಅನ್ನುವಾಗಲೇ, 'ಆ ಹಿನ್ನೆಲೆಯೂ ಪತ್ತೆ ಹಚ್ಚಬೇಕು' ಎಂದು ವಿಚಾರಣೆ ಮುಗಿಸಿದ್ದರು.